ದಿನಾಂಕ 15.06.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ 3 ಮತ್ತು 4ನೇ ಪ್ರತಿವಾದಿ ಪರ ಶ್ರೀ ಎಸ್.ಎನ್ ವಕೀಲರಿಂದಃ

ಈ ದಾವೆಯ ವಾದಿ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ. ದಾವಾ ಆಸ್ತಿ ವಾದಿಯ ಹೆಸರಿನಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ವಾದಿಯ ಹೆಸರಿನಲ್ಲಿ ಇಲ್ಲ, ಆದರೆ ಸ್ವಾಮೀಜಿಯ ಮಠದ ದೇವರ ಹೆಸರಿನಲ್ಲಿ ಇದೆ. ದಾವಾ ಆಸ್ತಿಗೆ ವಾದಿ ಸಂಪೂರ್ಣ ಮಾಲೀಕರು ಎಂದು ತೋರಿಸಲು ದಾಖಲೆಗಳು ಇವೆ. ಆ ಬಗ್ಗೆ ಯಾವುದಾದರೂ ಹಕ್ಕುಪತ್ರಗಳು ಇವೆಯೇ ಎಂದು ಕೇಳಿದ ಪ್ರಶ್ನೆಗೆ ಟೈಟಲ್ ಡೀಡ್ಸ್ ಬರುವುದಿಲ್ಲ ಎಂದು ಉತ್ತರಿಸುತ್ತಾರೆ. ಕಂದಾಯ ದಾಖಲಾತಿಗಳನ್ನು ಹೊರತು ಪಡಿಸಿ ವಾದಿಯೇ ದಾವಾ ಆಸ್ತಿಯ ಸಂಪೂರ್ಣ ಮಾಲೀಕರು ಎಂದು ತೋರಿಸಲು ಯಾವುದಾದರೂ ದಾಖಲಾತಿಗಳು ಇವೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆ ಬಗ್ಗೆ ತನಗೆ ಹೆಚ್ಚಿನ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ.

ನಿಪಿ-1 ರ ಪಹಣಿ ಪತ್ರಿಕೆಯಲ್ಲಿ ವಾದಿಯ ಹೆಸರು ಇಲ್ಲ. ನರಸಿಂಹ ಸ್ವಾಮಿ ವಾದಿಯ ದೇವರು ಎಂದು ಹೇಳಲು ದಾಖಲೆ ಇದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಇರಬಹುದು ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರಿದು ಸ್ವಾಮೀಜಿಯ ಬಳಿ ಕೇಳಿ ತಿಳಿದುಕೊಂಡು ಹೇಳಬಲ್ಲೆ ಎಂದು ಉತ್ತರಿಸುತ್ತಾರೆ. ನಿಪಿ-1ರಲ್ಲಿ ಹೆಸರಿಸಿರುವ ನರಸಿಂಹ ದೇವರ ಪ್ರತಿಷ್ಠಾಪನೆ ಎಲ್ಲಿದೆ ಎಂದು ಕೆಳಿದ ಪ್ರಶ್ನೆಗೆ ಸಾಕ್ಷಿ ಸುಬ್ರಹ್ಮಣ್ಯ ಮಠದ ಎದುರುಗಡೆ, ಸುಬ್ರಹ್ಮಣ್ಯ ದೇವಾಸ್ಥಾನದ ಅಂಗಳದ ಒಳಗೆ ಇದೆ ಎಂದು ಉತ್ತರಿಸುತ್ತಾರೆ. ಆ ನರಸಿಂಹ ಗುಡಿಯ ಬಗ್ಗೆ ದೇವಸ್ಥಾನ ಮತ್ತು ಮಠದವರ ನಡುವೆ ಯಾವುದಾದರೂ ನ್ಯಾಯಾಲಯದಲ್ಲಿ ತೀರ್ಪು ಆಗಿರುವ ವಿಚಾರ ನಿಮಗೆ ಗೊತ್ತಿದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ತನಗೆ ಸರಿಯಾಗಿ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ.

RSA No. 713/1972 ಹಾಗೂ 714/1972 ರಲ್ಲಿ ಮಾಡಿಕೊಂಡ ರಾಜೀ ತೀರ್ಮಾನದ ಬಗ್ಗೆ ನಿಪಿ-14 ರಲ್ಲಿ ನಮೂದು ಇದೆ. ಅದನ್ನು ನಾನು ನೋಡಿದ್ದೇನೆ. ಆ ರಾಜೀ ತೀರ್ಮಾನದ ಪ್ರಕಾರ ನರಸಿಂಹ ಗುಡಿಯಲ್ಲಿ ಪೂಜೆ

ಮಾಡುವ ಹಕ್ಕನ್ನು ಮಾತ್ರ ವಾದಿಗೆ ನೀಡಲಾಗಿದೆ ಎಂದರೆ ಸರಿಯಲ್ಲ. ಆ ರಾಜೀ ಡಿಕ್ರಿಯನ್ನು ನಾನು ಓದಿ ನೋಡಿದ್ದೇನೆ.

O.S.83/2012 ಎನ್ನುವ ದಾವೆಯನ್ನು ಈ ದಾವೆಯ ವಾದಿ 3ನೇ ಪ್ರತಿವಾದಿಯ ವಿರುದ್ಧ ಸುಳ್ಯದ ಸಿವಿಲ್ ನ್ಯಾಯಾಲಯದಲ್ಲಿ ಹೂಡಿದ್ದರು ಎಂದರೆ ಸರಿ. ಸದರಿ ದಾವೆಯ ವಾದ ಪತ್ರದ ಪ್ರತಿಯನ್ನು ಸಾಕ್ಷಿದಾರರಿಗೆ ತೋರಿಸಲಾಗಿ ಸಾಕ್ಷಿದಾರರು ಆ ದಾಖಲೆಯನ್ನು ನೋಡಿ ಗುರುತಿಸಿದ್ದರಿಂದ ಆ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಆ ದಾವೆಯನ್ನು ನರಸಿಂಹ ದೇವರ ಆಸ್ತಿಗೆ ಸಂಬಂಧಿಸಿದಂತೆ ಹೂಡಲಾಗಿತ್ತು ಎಂದರೆ ಸರಿ. ನರಸಿಂಹ ದೇವರ ಆಡಳಿತದಾರ ಎನ್ನುವ ನೆಲೆಯಲ್ಲಿ ವಾದಿ O.S.83/2012 ರ ದಾವೆಯನ್ನು ಹೂಡಿದ್ದರು ಎಂದರೆ ಸರಿ. ಆ ದಾವೆಯನ್ನು ವಾದಿ ಹಿಂದಕ್ಕೆ ಪಡೆದಿದ್ದು ಅದಕ್ಕೆ ಬದಲಾಗಿ ನಾವು ಎರಡು ದಾವೆ ಹೂಡಿದ್ದೇವೆ ಎಂದರೆ ಸರಿ. ಆ ದಾವೆಗಳು ಇನ್ನು ವಿಚಾರಣೆಗೆ ಬಾಕಿ ಇವೆ ಎಂದರೆ ಸರಿ. ದೇವಸ್ಥಾನದ ಆಡಳಿತವನ್ನು ವಾದಿಗೆ ಯಾರು ಯಾವಾಗ ವಹಿಸಿಕೊಟ್ಟರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಮದ್ವಾಚಾರ್ಯರ ಕಾಲದಿಂದ ಇದೆ ಎಂದು ಉತ್ತರಿಸುತ್ತಾರೆ.

ಮಠದ ಆಸ್ತಿಯ ವ್ಯವಹಾರವನ್ನು ನೋಡಿಕೊಳ್ಳಲು ಆಡಳಿತಾಧಿಕಾರಿ ಒಬ್ಬರು ಇದ್ದಾರೆ ಎಂದರೆ ಸರಿ. ಅವರ ಹೆಸರು ಸುದರ್ಶನ್ ಜೋಯಿಶ್. ಸದರಿ ಸುದರ್ಶನ್ ಜೋಯಿಸ್ ರವರು ವಾದಿಯ ಪೂರ್ವಾಶ್ರಮದ ಸಹೋದರ ಎಂದರೆ ಸರಿ. ಅವರು ಈಗಲೂ ಇದ್ದಾರೆ ಎಂದರೆ ಸರಿ. ಮಠದ ಎಲ್ಲಾ ಆಸ್ತಿಗಳ ವ್ಯವಹಾರಗಳನ್ನು ಅವರೇ ನೋಡಿಕೊಳ್ಳುತ್ತಾರೆ ಎಂದರೆ ಸರಿ. ಅವರು ನನಗೆ ಯಾವುದೇ ಅಧಿಕಾರವನ್ನು ಕೊಟ್ಟಿಲ್ಲ. ಈ ದಾವೆಯನ್ನು ಸುದರ್ಶನ್ ಜೋಯಿಶ್ ದಾಖಲಿಸಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಸ್ವಾಮೀಜಿಯ ಪರವಾಗಿ ದಾಖಲಿಸಿದ್ದಾರೆ ಎಂದು ನುಡಿಯುತ್ತಾರೆ.

ದಾವೆ ಹೂಡಲು ಸುದರ್ಶನ್ ಜೋಯಿಶ್ ರವರಿಗೆ ಸ್ವಾಮೀಜಿಯವರು ಜಿ.ಪಿ.ಎ ಕೊಟ್ಟಿದ್ದರೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆ ಬಗ್ಗೆ ತನಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ. ಮಠಕ್ಕೆ ಸಂಬಂಧಿಸಿದ ಆಸ್ತಿಗಳ ಬಗ್ಗೆ ನಮ್ಮಲ್ಲಿ ದಾಖಲೆ/ ಪಟ್ಟಿ ಇವೆ. 3ನೇ ಪ್ರತಿವಾದಿ endowment ದೇವಸ್ಥಾನ ಎಂದರೆ ಸರಿ. ಆ ದೇವಸ್ಥಾನದ ಆಡಳಿತ ಸರ್ಕಾರದ ನಿಯಂತ್ರದಲ್ಲಿದೆ ಎಂದರೆ ಸರಿ. ಆ ದೇವಸ್ಥಾನಕ್ಕೆ ಸಂಬಂಧಿಸಿದ ಆಸ್ತಿಗಳ ಪಟ್ಟಿ ಆ ದೇವಸ್ಥಾನಲ್ಲಿದೆ ಎಂದರೆ ಸರಿ. ಅದನ್ನು ಕಲಂ 25 ರಡಿಯಲ್ಲಿ ನೋಂದಾಯಿಸಬೇಕು

ಎಂದರೆ ಸರಿ. ಆ ರಿಜಿಸ್ಟರಿನಲ್ಲಿ ದೇವಸ್ಥಾನದಲ್ಲಿ ಇರುವ ದೇವರು, ಪರಿವಾರ ದೇವರು, ಪೂಜಾ ವಿಧಾನ ಎಲ್ಲವನ್ನು ನಮೂದಿಸಬೇಕು ಎಂದರೆ ಸರಿ. 1954ರಲ್ಲಿ ಆದ ಡಿಕ್ಟಂ ಪ್ರಕಾರ ನರಸಿಂಹದೇವರು ಕುಕ್ಕೇ ಸುಬ್ರಹ್ಮಣ್ಯ ದೇವಸ್ಥಾನದ ಪರಿವಾರ ದೇವರು ಎಂದರೆ ಸರಿಯಲ್ಲ. ಕುಕ್ಕೇ ಸುಬ್ರಹ್ಮಣ್ಯ ದೇವಸ್ಥಾನ ಹಾಗೂ ನರಸಿಂಹ ದೇವರ ಗುಡಿ ಸರಕಾರಿ ಜಮೀನಿನಲ್ಲಿ ಇದೆ ಎಂದರೆ ಸರಿಯಲ್ಲ.

ಆ ಡಿಕ್ಟಂ ಆಧಾರದಲ್ಲಿ ಮಠದವರು ಹಲವಾರು ರಿಟ್ ಅರ್ಜಿಗಳನ್ನು ಉಚ್ಚ ನ್ಯಾಯಾಲಯದಲ್ಲಿ ಹೂಡಿದ್ದಾರೆ ಎಂದರೆ ಸಾಕ್ಷಿ ಆ ಬಗ್ಗೆ ತನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಆ ಡಿಕ್ಟಂ ಪ್ರಕಾರವೇ RSA 713/1972 ಹಾಗೂ 714/1972 ರಲ್ಲಿ ರಾಜೀ ತೀರ್ಮಾನವಾಗಿದೆ ಎಂದರೆ ಸಾಕ್ಷಿ ಆ ಬಗ್ಗೆ ತನಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ. ಆ ರಾಜೀ ತೀರ್ಮಾನ ಮಾಡಿಕೊಂಡ ಪೀಠಾಧಿಪತಿಗಳು ಪೀಠವನ್ನು ತ್ಯಜಿಸಿ ಮಠ ಬಿಟ್ಟು ಹೋಗಿದ್ದಾರೆ ಎಂದರೆ ಸರಿ. ಹಿಂದಿನ ಪೀಠಾಧಿಪತಿಯ ಹೆಸರಿನಲ್ಲಾಗಲೀ ಅಥವಾ ಈಗಿನ ಪೀಠಾಧಿಪತಿಯ ಹೆಸರಿನಲ್ಲಾಗಲೀ ಯಾವತ್ತೂ ದಾವಾ ಆಸ್ತಿ ಇರಲಿಲ್ಲ ಎಂದರೆ ಸಾಕ್ಷಿ ಅವರ ವೈಯಕ್ತಿಕ ಹೆಸರಿನಲ್ಲಿರಲಿಲ್ಲ, ಮಠದ ಹೆಸರಿನಲ್ಲಿತ್ತು ಎಂದು ಉತ್ತರಿಸುತ್ತಾರೆ.

ಯಾವುದೇ ಅಡಂಗಲ್ ನಲ್ಲಾಗಲೀ ಪಹಣಿ ಪತ್ರಿಕೆಯಲ್ಲಾಗಲೀ ಮಠದ ಹೆಸರು ಇಲ್ಲ ಎಂದರೆ ಸರಿಯಲ್ಲ. ನನಗೆ ಜಿ.ಪಿ.ಎ ಕೊಟ್ಟ ವ್ಯಕ್ತಿ ಲೌಕಿಕ ವ್ಯವಹಾರದಿಂದ ದೂರ ಇರುವ ಸರ್ವ ಸಂಗ ಪರಿತ್ಯಾಗಿ ಎಂದರೆ ಸರಿ. ಈ ದಾವೆಯನ್ನು ನಾನು ಹೂಡಿಲ್ಲ ಎಂದರೆ ಸರಿ. ನಿಪಿ-12ನ್ನು ವಾದಿಯ ಹಿಂದಿನ ಜಿ.ಪಿ.ಎ ದಾರರು ತಯಾರಿಸಿದ್ದಾರೆ. ದಿ. 19.3.2019 ರಂದು ನಿಪಿ-12 ನ್ನು ತಯಾರಿಸಲಾಗಿದೆ. ಆಗ ನಾನು ಹಾಜರಿದ್ದೆ. ಆಗ ನಾನು ಹಾಗೂ ಹಿಂದಿನ ಜಿ.ಪಿ.ಎ ದಾರ ಪ್ರಸನ್ನ ಹಾಜರಿದ್ದೆವು. ಆಗ ವಾದಿ ಹಾಜರಿರಲಿಲ್ಲ. ಆಗ ಆಡಳಿತಾಧಿಕಾರಿಯವರೂ ಸಹ ಹಾಜರಿರಲಿಲ್ಲ. ಆ ರೀತಿ ಅಳತೆ ಮಾಡುವಾಗ 3 ಮತ್ತು 4ನೇ ಪ್ರತಿವಾದಿಗೆ ತಿಳಿಸಿಲ್ಲ. ನಾವು 4 ಜನ ಸೇರಿ ನಿಪಿ-12 ರಂತೆ ಜಾಗವನ್ನು ಅಳತೆ ಮಾಡಿದ್ದೇವೆ. ನಾವು ಅಳತೆ ಮಾಡುವಾಗ ನಿಪಿ-12 ರಲ್ಲಿ ತೋರಿಸಿದ ಕಲ್ಲುಗಳು ಇದ್ದವು.

ನಿಪಿ-12 ರಲ್ಲಿ ಕಾಣುವ ಕಾಶಿಕಟ್ಟೆಯಿಂದ ಕುಮಾರಧಾರೆಗೆ ಹೋಗುವ ರಸ್ತೆ ಸ.ನಂ. 49ರಲ್ಲಿ ಇದೆ. ಸ.ನಂ. 49 ದಾವಾ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿದೆ ಎಂದರೆ ಸರಿ.

ನಿಪಿ-12ರಲ್ಲಿ ಕಾಣಿಸಿದ ಕಾಶಿಕಟ್ಟೆಯಿಂದ ಕುಮಾರಧಾರೆಗೆ ಹೋಗುವ ರಸ್ತೆ ಸ.ನಂ.49 ರಲ್ಲಿ ಕಂಡುಬರುತ್ತದೆ ಎಂದರೆ ಸರಿಯಲ್ಲ. ನಿಪಿ-12 ರಲ್ಲಿ ದಾವಾ ಆಸ್ತಿಯಲ್ಲಿ ರಸ್ತೆಯ ಯಾವುದೇ ಅಂಶವನ್ನು ಕಾಣಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ 7 ಫೋಟೋಗಳನ್ನು ತೋರಿಸಿ ಅವು ಕಾಶಿಕಟ್ಟೆಯಿಂದ ಕುಮಾರಧಾರೆಗೆ ಹೋಗುವ ರಸ್ತೆಯ ಅಗಲೀಕರಣದ ಸಮಯದಲ್ಲಿ ತೆಗೆದ ಫೋಟೋಗಳು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿದಾರರು ಅವುಗಳನ್ನು ನೋಡಿ ಹೌದು ಎಂದು ಒಪ್ಪಿದ್ದರಿಂದ ಅವುಗಳನ್ನು ಕ್ರಮವಾಗಿ ನಿಡಿ-2 ರಿಂದ 8 ಎಂದು ಗುರುತಿಸಲಾಯಿತು.

ರಿಟ್ ಅರ್ಜಿ ಸಂ. 9557/2014 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ಮಾಡಿದ ಆದೇಶದ ನೈಜ ಪ್ರತಿಯನ್ನು ಸಾಕ್ಷಿದಾರರಿಗೆ ತೋರಿಸಲಾಗಿ ಸಾಕ್ಷಿದಾರರು ಅದನ್ನು ನೋಡಿ ಒಪ್ಪಿದ್ದರಿಂದ ಆ ಆದೇಶದ ಪ್ರತಿಯನ್ನು ನಿಡಿ-9 ಎಂದು ಗುರುತಿಸಲಾಯಿತು. ರಿಟ್ ಅರ್ಜಿ ಸಂ. 5775/2019 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ಮಾಡಿದ ಆದೇಶದ ನೈಜ ಪ್ರತಿಯನ್ನು ಸಾಕ್ಷಿದಾರರಿಗೆ ತೋರಿಸಲಾಗಿ ಸಾಕ್ಷಿದಾರರು ಅದನ್ನು ನೋಡಿ ಒಪ್ಪಿದ್ದರಿಂದ ಆ ಆದೇಶದ ಪ್ರತಿಯನ್ನು ನಿಡಿ-10 ಎಂದು ಗುರುತಿಸಲಾಯಿತು. ಸಾಕ್ಷಿಗೆ ದಿ.5.4.2019ರಂದು 3ನೇ ಪ್ರತಿವಾದಿ ಪರ ವಕೀಲರು ನೀಡಿದ ಪ್ರತ್ಯುತ್ತರದ ಕಚೇರಿ ಪ್ರತಿಯನ್ನು ತೋರಿಸಿ ಅದು ನಿಪಿ-3 ಕ್ಕೆ ಕೊಟ್ಟ ಪ್ರತ್ಯುತ್ತರ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿದಾರರು ಆ ದಾಖಲೆಯನ್ನು ನೋಡಿ ಗುರುತಿಸಿದ್ದರಿಂದ ನಿಡಿ-11 ಎಂದು, ಅಂಚೆ ಸ್ವೀಕೃತಿ ಪತ್ರವನ್ನು ನಿಡಿ-12 ಎಂದು ಗುರುತಿಸಲಾಯಿತು.

ಕುಕ್ಕೇಸುಬ್ರಹ್ಮಣ್ಯದಲ್ಲಿ ಶ್ರೀ ಸಂಪುಟ ನರಸಿಂಹ ಸ್ವಾಮಿ ಮಠ, ಸುಬ್ರಹ್ಮಣ್ಯ ಎನ್ನುವ ಒಂದೇ ಮಠ ಇದೆ ಎಂದರೆ ಸಾಕ್ಷಿ ಮಠ ಒಂದೇ ಇದ್ದು ಅದನ್ನು ಸಂಪುಟ ನರಸಿಂಹ ಸ್ವಾಮಿ ಮಠ ಹಾಗೂ ಸುಬ್ರಹ್ಮಣ್ಯ ಮಠ ಎಂದು ಎರಡೂ ಹೆಸರಿನಿಂದ ಕರೆಯುತ್ತಾರೆ ಎಂದು ಉತ್ತರಿಸುತ್ತಾರೆ. ನನ್ನ ತಿಳುವಳಿಕೆಯ ಪ್ರಕಾರ ಮಠದ ಹೆಸರು ಶ್ರೀ ಸಂಪುಟ ನರಸಿಂಹ ಸ್ವಾಮಿ ಸುಬ್ರಹ್ಮಣ್ಯ ಮಠ ಹಾಗೂ ಸುಬ್ರಹ್ಮಣ್ಯ ಮಠ.

ವಾದಿ ಸ್ವಾಮೀಜಿ ವೈಷ್ಣವ ಸಂಪ್ರದಾಯವನ್ನು ಪಾಲಿಸುವವರು ಎಂದರೆ ಸರಿ. ವಾದಿ ಮಠದಲ್ಲಿ ಮಧ್ವ ಸಂಪ್ರದಾಯವನ್ನು ಪಾಲಿಸುತ್ತಾರೆ ಎಂದರೆ ಸರಿ. ಕುಕ್ಕೇ ಸುಬ್ರಹ್ಮಣ್ಯ ದೇವಸ್ಥಾನ ಶೈವ ಸಂಪ್ರದಾಯದ ದೇವಸ್ಥಾನ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಮಠ ಸಂಪ್ರದಾಯದ ದೇವಸ್ಥಾನ ಎಂದು ಉತ್ತರಿಸುತ್ತಾರೆ. ಕುಕ್ಕೇ

ಸುಬ್ರಹ್ಮಣ್ಯ ದೇವಸ್ಥಾನ ಮಠ ಸಂಪ್ರದಾಯದ ದೇವಸ್ಥಾನ ಎಂದು ಹೇಳಲು ನಿಮ್ಮ ಬಳಿ ದಾಖಲೆಗಳು ಇವೆಯೇ ಕೇಳಿದ ಪ್ರಶ್ನೆಗೆ ಸಾಕ್ಷಿ ಇರಬಹುದು ಎಂದು ಉತ್ತರಿಸುತ್ತಾರೆ. ವಾದಿ ಮಠವನ್ನು ಯಾರು ಯಾವಾಗ ಮಧ್ವ ಮಠವಾಗಿ ಪರಿವರ್ತನೆ ಮಾಡಿದ್ದು ಎನ್ನುವ ಬಗ್ಗೆ ಹಿಂದಿನ ಪೀಠಾಧಿಪತಿ ವಿದ್ಯಾಭೂಷಣರವರು ಬರೆದ ಅವರ ಆತ್ಮಚರಿತ್ರೆ ನೆನಪೇ ಸಂಗೀತ ಎನ್ನುವ ಪುಸ್ತಕದಲ್ಲಿ ಉಲ್ಲೇಖವಿದೆ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

1872 ರಿಂದ ಈವರೆಗೆ ಮಠ ಹಾಗೂ ದೇವಸ್ಥಾನದ ನಡುವೆ ಹಲವಾರು ದಾವೆಗಳು ನಡೆದಿವೆ ಎಂದರೆ ಸರಿ. ಒ.ಎಸ್. ನಂ. 27/1886 ರ ಬಗ್ಗೆ ನನಗೆ ಮಾಹಿತಿ ಇಲ್ಲ. ಒ.ಎಸ್. ನಂ.145/1913 ರ ದಾವೆಯ ಬಗ್ಗೆ ನನಗೆ ಮಾಹಿತಿ ಇಲ್ಲ. ರಿಟ್ ಅರ್ಜಿ ಸಂ. 6614/2008 ರ ಬಗ್ಗೆ ನನಗೆ ಮಾಹಿತಿ ಇಲ್ಲ. ಕುಕ್ಕೇ ಸುಬ್ರಹ್ಮಣ್ಯ ದೇವಸ್ಥಾನ ಶೈವ ದೇವಸ್ಥಾನವಾಗಿದ್ದು ಮಠ ವೈಷ್ಣವ ಸಂಪ್ರದಾಯದ ಧಾರ್ಮಿಕ ಕೇಂದ್ರವಾಗಿದೆ ಎಂದು ಈಗಾಗಲೇ ಮಾನ್ಯ ಉಚ್ಚ ನ್ಯಾಯಾಲಯ ಹಲವು ಪ್ರಕರಣಗಳಲ್ಲಿ ತೀರ್ಪು ನೀಡಿದೆ ಎಂದರೆ ಸಾಕ್ಷಿ ಆ ಬಗ್ಗೆ ತನಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ.

ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ ದೇವಸ್ಥಾನದ ಒಬ್ಬರು ಟ್ರಸ್ಟೀ ಎಂದು ನೇಮಕಗೊಂಡವರಲ್ಲಿ ವಾದಿ ಮಠದ ಸ್ವಾಮೀಜಿ ಒಬ್ಬರು ಎಂದರೆ ಸಾಕ್ಷಿ ಆ ಬಗ್ಗೆ ತನಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ. ವಾದಿ ಮಠದ ಸ್ವಾಮೀಜಿ, 3ನೇ ಪ್ರತಿವಾದಿ ದೇವಸ್ಥಾನದ ಟ್ರಸ್ಟೀ ಎಂದು ನೇಮಕಗೊಂಡಾಗ ಆ ದೇವಸ್ಥಾನ Madras Hindu Endowment Act ನ ಅಡಿಯಲ್ಲಿ ಇತ್ತು ಎಂದರೆ ಸಾಕ್ಷಿ ಆ ಬಗ್ಗೆ ತನಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ.

1845 ರಿಂದ 1900 ರ ವರೆಗೆ ಮೂರು ತಲೆಮಾರಿನ ಸ್ವಾಮಿಗಳು 3ನೇ ಪ್ರತಿವಾದಿ ದೇವಸ್ಥಾನದ ಒಬ್ಬ ಟ್ರಸ್ಟೀಯಾಗಿದ್ದು, 1900 ರ ನಂತರ ಅವರಿಗೆ ಟ್ರಸ್ಟೀ ಶಿಪ್ ಕೊಟ್ಟಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ತನಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ. ಟ್ರಸ್ಟೀಶಿಪ್ಪನ್ನು ರದ್ದು ಗೊಳಿಸಿದ ಬಗ್ಗೆ ಹೂಡಿದ ಒ.ಎಸ್ ನಂ. 27/1886 ಎನ್ನುವ ದಾವೆಯಲ್ಲಿ ಟ್ರಸ್ಟೀ ನೇಮಕಾತಿಯನ್ನು ಹೊರತು ಪಡಿಸಿ ಬೇರೆ ಹಕ್ಕು ಇಲ್ಲ ಎಂದು ಆ ದಾವೆಯಲ್ಲಿ ತೀರ್ಪು ಆಗಿತ್ತು ಎಂದರೆ ಸಾಕ್ಷಿ ಆ ಬಗ್ಗೆ ತನಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ. ಆ ದಾವೆಯಲ್ಲಿ ಹಾಜರು ಪಡಿಸಿದ ತಾಮ್ರ ಶಾಸನವನ್ನು ಪೋರ್ಜರಿ

ಮಾಡಲಾಗಿದೆ ಎಂದು ಆ ದಾವೆಯಲ್ಲಿ ತೀರ್ಪು ನೀಡಲಾಗಿದೆ ಎಂದರೆ ಸಾಕ್ಷಿ ಆ ಬಗ್ಗೆ ತನಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ. 1900 ರ ನಂತರ ಸ್ವಾಮಿಗಳಿಗೂ ದೇವಸ್ಥಾನದ ಆಡಳಿತದ ವಿಚಾರಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ತನಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ.

ನರಸಿಂಹ ದೇವರ ಹೆಸರಿನಲ್ಲಿರುವ ಎಲ್ಲಾ ಆಸ್ತಿಗಳು ವಾದಿಯ ಆಸ್ತಿಗಳೇ ಎಂದು ಕೇಳಿದ ಪ್ರಶ್ನೆಗೆ ತಮ್ಮ ಸ್ವಾಧೀನಲ್ಲಿರುವ ನರಸಿಂಹ ದೇವರ ಹೆಸರಿನಲ್ಲಿರುವ ಎಲ್ಲಾ ಆಸ್ತಿಗಳು ತಮ್ಮುವು ಎಂದು ಉತ್ತರಿಸುತ್ತಾರೆ. ನರಸಿಂಹ ದೇವರು ಸುಬ್ರಹ್ಮಣ್ಯ ಗ್ರಾಮದ ಸರ್ಕಾರಿ ಸ.ನಂ.32/1 ರಲ್ಲಿ ಇರುವುದು ಎಂದರೆ ಸಾಕ್ಷಿ ಇರಬಹುದು ಎಂದು ಉತ್ತರಿಸುತ್ತಾರೆ. ಅಲ್ಲಿ 3ನೇ ಪ್ರತಿವಾದಿ ದೇವಸ್ಥಾನ ಹಾಗೂ ನರಸಿಂಹ ದೇವರ ಗುಡಿ ಇದೆ ಎಂದರೆ ಸರಿ. 3ನೇ ಪ್ರತಿವಾದಿ ದೇವಸ್ಥಾನ ಸರ್ಕಾರಿ endowment ಗೆ ಒಳಪಟ್ಟ ದೇವಸ್ಥಾನ ಆಗಿದ್ದು, ಅದರ ಪರಿವಾರ ದೇವರಾದ ನರಸಿಂಹ ದೇವರು ಸರ್ಕಾರಿ endowment ಗೆ ಒಳಪಟ್ಟವರು ಎಂದರೆ ಸರಿಯಲ್ಲ.

ಕುಕ್ಕೇ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ನರಸಿಂಹ ದೇವರಲ್ಲದೇ ಬೇರೆ ಪರಿವಾರ ದೇವರು ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನರಸಿಂಹದೇವರು ಪರಿವಾರ ದೇವರಲ್ಲ ಎಂದು ಉತ್ತರಿಸುತ್ತಾರೆ. ನರಸಿಂಹ ದೇವರ ಪ್ರತಿನಿತ್ಯದ ಪೂಜಾ ವಿಧಿ ವಿಧಾನಕ್ಕೆ 3ನೇ ಪ್ರತಿವಾದಿ ದೇವಸ್ಥಾನದಿಂದ ಸಾಮಗ್ರಿಗಳು ಬರುತ್ತವೆ ಎಂದರೆ ಸರಿ. ಆ ಸಾಮಾಗ್ರಿಗಳನ್ನು ಸ್ವೀಕರಿಸುವಾಗ ರಿಜಿಸ್ಟರಿಗೆ ಸಹಿ ಮಾಡಿ ತರುತ್ತಾರೆ ಎಂದರೆ ಸರಿ. ಯಾವ ಯಾವ ಸಾಮಗ್ರಿಗಳನ್ನು ನರಸಿಂಹ ದೇವರಿಗೆ ಕೊಡಬೇಕು ಎಂಬ ಬಗ್ಗೆ ಡಿಕ್ಟಂ ನಲ್ಲಿ ಉಲ್ಲೇಖವಿದೆ ಎಂದರೆ ಸಾಕ್ಷಿ ಆ ಬಗ್ಗೆ ತನಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯ ಮುಂದುವರಿದ ಪಾಟೀ ಸವಾಲಿಗೆ 3 ಮತ್ತು 4ನೇ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಸಮಯಾಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ